ಶ್ರೀ ಕೆ. ಎನ್. ನಾಗೇಗೌಡ : ನಿಜ 1993-94ರಲ್ಲಿ ಟೆಂಡರ್ ಕರೆಯಲಾಗಿತ್ತು. ಇದರಲ್ಲಿ ಮಲತಾಯಿ ಧೋರಣೆ ಇಲ್ಲ. ಬಹುಶಃ ಅವರನ್ನು ಕರೆದು ನೆಗೋಷಿಯೇಟ್ ಮಾಡುವುದರಲ್ಲಿ ಸ್ವಲ್ಪ ಡಿಲೆ ಆಗಿರಬಹುದು, ಈಗ ಫ್ರೆಷ್ ಟೆಂಡರ್ ಕರೆದು ಕೆಲಸ ಮಾಡಿಸುತ್ತೇವೆ. ಮಲತಾಯಿ ಧೋರಣೆ ಇಲ್ಲ.

ಶ್ರೀ ವಿ. ಟಿ. ರಾಮಸ್ವಾಮಿ : ಪ್ರಾರಂಭ ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಇವತ್ತು ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದಾರೆ, ಕೂಡಲೇ ಟೆಂಡರ್ ಕರೆಸಿ ಕೆಲಸ ಪ್ರಾರಂಭ ಮಾಡಿಸುತ್ತೇನೆ. ರಾಮಸ್ವಾಮಿಯವರೇ, ಯಾವದೇ ಕಾರಣಕ್ಕೂ ಇದನ್ನು ನಿಲ್ಲಿಸುವುದಿಲ್ಲ. ಆದಷ್ಟು ಬೇಗ ಕೆಲಸ ಮುಗಿಸಿಕೊಡುತ್ತೇನೆ. ದಯವಿಟ್ಟು ನಮ್ಮ ಮಾತಿನಲ್ಲಿ ನಂಬಿಕೆ ಇಟ್ಟುಕೊಳ್ಳಿ.

ಶ್ರೀ ಬಿ. ಶಿವರಾಂ : ನಾಗೇಗೌಡರು ಗೊರೂರು ಐಬಿನಲ್ಲಿ ಬಂದು ಕುಳಿತುಕೊಂಡು ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ 15 ದಿವಸದಲ್ಲಿ ಶುರು ಮಾಡಿಸುತ್ತೇನೆ ಎಂದು ಹೇಳಿಬಂದು ಒಂದು ವರ್ಷವಾಯಿತು. ಇದೇನು ಮೊದಲನೇ ಪ್ರಸ್ತಾಪವಲ್ಲ, ಇದು ನಡೆಯುತ್ತಲೇ ಇರುತ್ತದೆ.

ಶ್ರೀ ಕೆ. ಎನ್. ನಾಗೇಗೌಡ : ಶಿವರಾಂ, ನೀವೇನೂ ಚಿತಾವಣೆ ಮಾಡಬೇಡಿ, ಈ ಸಲ ಮಾಡಿಸಿಕೊಡುತ್ತೇನೆ.

ಕೊರಟಗೆರೆ ತಾಲ್ಲೂಕಿನಲ್ಲಿ ಹೊಸ ಪೋಲೀಸ್ ಠಾಣೆ ಪ್ರಾರಂಭ

463 - ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಹೊಸದಾಗಿ ಆರಕ್ಷಕ ಠಾಣೆ ತೆರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೆ? ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ತೆರೆಯಲಾಗುವುದು?*

ಆ) *ಈ ಹಿಂದೆ ಕೊರಟಗೆರೆ ತಾಲ್ಲೂಕು ಕೊಳಾಲದಲ್ಲಿ ಆರಕ್ಷಕ ಠಾಣೆ ಮಂಜೂರಾತಿ ನೀಡಿದ್ದರೂ ಇದುವರೆವಿಗೂ ಠಾಣೆ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದಕ್ಕೆ ಇರುವುದಕ್ಕೆ ಕಾರಣಗಳೇನು?*

ಶ್ರೀ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು. ಕೊಳಾಲದಲ್ಲಿ ಪೋಲೀಸ್ ಠಾಣೆ ತೆರೆಯಲು ಪ್ರಸ್ತಾವನೆ ಇದೆ.

ಆ) ಹೌದು. ಆದ್ಯತೆ, ಅಗತ್ಯತೆ ಮತ್ತು ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಚನ್ನಿಗಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಎರಡರಿಂದ ಮೂರು ಪೋಲೀಸ್ ಠಾಣೆ ಇದ್ದು, ಕೊಟ್ಟಿಗೆ ತಾಲ್ಲೂಕಿನಲ್ಲಿ ಕೇವಲ ಒಂದೇ ಒಂದು ಪೋಲೀಸ್ ಠಾಣೆ ಇದೆ. ಕೋಳಾಲ ಎಂಬ ಹೋಬಳಿಯಲ್ಲಿ 1995-96, 96-97ನೇ ಸಾಲಿನಲ್ಲಿ 16 ಮರ್ಡರ್‌ಗಳು ಆಗಿದೆ. ನಾನು ಅಲ್ಲಿಯ ಕಾನೂನಿನ ಸುವ್ಯವಸ್ಥೆ ದೃಷ್ಟಿಯಿಂದ ಸರ್ಕಾರವನ್ನು, ಆ ಇಲಾಖೆಯ ಮಂತ್ರಿಗಳನ್ನು ಸುಮಾರು ಸಲ ಪ್ರಾರ್ಥನೆ ಮಾಡಿ ಕೇಳಿದೆ ಇಲ್ಲಿಗೆ ಒಂದು ಪೋಲೀಸ್ ಠಾಣೆಯನ್ನು ಕೊಡಿ ಎಂದು. ಆದರೆ ಇದೂವರೆವಿಗೂ ಒಂದು ಪೋಲೀಸ್ ಠಾಣೆ ಕೊಟ್ಟಿಲ್ಲ. ಆದಕಾರಣ ಮಾನ್ಯ ಮಂತ್ರಿಗಳು ಈಗಲಾದರೂ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ನಮ್ಮ ತಾಲ್ಲೂಕಿಗೆ ಪೋಲೀಸ್ ಠಾಣೆಯನ್ನು ಕೊಡುವಂತಹ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಸದಸ್ಯರುಗಳು ಹೇಳಿರುವಂತಹ ವಿಚಾರ ಸರಿ ಇದೆ. ಸರ್ಕಾರ ಈ ವರ್ಷದ ಹೊಸ ಪೋಲೀಸ್ ಠಾಣೆಗಳನ್ನು ಮಂಜೂರಾತಿ ಮಾಡುವುದಾದಲ್ಲಿ ಸರ್ಕಾರದ ಹಣಕಾಸಿನ ಇತಿ ಮಿತಿಯಲ್ಲಿ ಅವರ ಬೇಡಿಕೆಯನ್ನು ಪರಿಶೀಲನೆ ಮಾಡತಕ್ಕಂತಹ ಭರವಸೆಯನ್ನು ನಾನು ಕೊಡುತ್ತೇಫೆ.

ಅಧ್ಯಕ್ಷರು : ಆಲ್ ರೈಟ್ ಕೊಡುತ್ತಾರಂತೆ ಬಿಡಿ ಚನ್ನಿಗಪ್ಪನವರೇ, ಇನ್ನೂ ಏನಾದರೂ ಕೇಳುವುದಿದ್ದರೆ ಕೇಳಿ, ಅದಕ್ಕೇನೂ ಅಭ್ಯಂತರ ಇಲ್ಲ.

ಶ್ರೀ ಸಿ. ಚನ್ನಿಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಪೋಲೀಸ್ ಠಾಣೆಯನ್ನು ತೆರೆಯುತ್ತೇವೆ ಎಂದು 1995ನೇ ಇಸವಿಯಲ್ಲಿ ಹೇಳಿದ್ದರೂ ಸಹ, ಈಗಾಗಲೇ 1996-97 ಆಯಿತು. 1997ನೇ ಜನವರಿ ತಿಂಗಳಲ್ಲಿ ಕೋಳಾಲ ಗ್ರಾಮದಲ್ಲಿ ಸುಮಾರು ಹಲ್ಲೆಗಳು, ಎಂಟರಿಂದ 10 ಪ್ರಕರಣಗಳು ಆ ಜನವರಿ ತಿಂಗಳಲ್ಲಿ ದಾಖಲಾಯಿತು. ಆಗಲೂ ಸಹ ನಾನು ಮಾನ್ಯ ಗೃಹ ಸಚಿವರನ್ನು ಕೇಳಿದ್ದೆ, ಈ ಕೂಡಲೇ ಪೋಲೀಸ್ ಠಾಣೆಯನ್ನು ಕೊಡಬೇಕು ಸ್ವಾಮಿ ಎಂದು. ಆದರೂ ಸಹ ಮಾನ್ಯ ಗೃಹ ಸಚಿವರು ಇದನ್ನು ತಳ್ಳಿಹಾಕಿ ಸುಮಾರು ಎಂಟು ತಿಂಗಳಾಗಿದೆ. ಇದೂವರೆವಿಗೂ ಅವರು ಯಾವುದೇ ವಿಚಾರವನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ದಯಮಾಡಿ ಆದಷ್ಟು ಬೇಗ ಈ ಪೋಲೀಸ್ ಠಾಣೆಯನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ತೀವ್ರ ಪರಿಶೀಲನೆ....

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಒಂದು ಕಾರಣ ಇರಬಹುದು. ಪೋಲೀಸ್ ಇಲಾಖೆಯಲ್ಲಿ ಇದ್ದಂಥ ಅನೇಕರು ಎಂ.ಎಲ್.ಎಗಳು ಎಂ.ಪಿ.ಗಳು ಆಗಿದ್ದಾರೆ. ಆದಕಾರಣ ಸಿಬ್ಬಂದಿ ಕೊರತೆ ಕೂಡ ಇರಬಹುದು.

ಶ್ರೀ ಜೆ. ಸಿ ಮಾಧುಸ್ವಾಮಿ : ಪೋಲೀಸ್ ಇಲಾಖೆಯಲ್ಲಿ ಇದ್ದವರು ಚುನಾವಣೆಯಲ್ಲಿ ನಿಲ್ಲಬಾರದು ಎಂದು ಏನಾದರೂ ನಿರ್ಭಂದ ಇದೆಯೇ? Is there any ban?

(ಗೊಂದಲ)

MR. SPEAKER : He has not insinuated.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಸುರೇಶ್ ಕುಮಾರ್ ಅವರು ಹೇಳಿರುವುದರಲ್ಲಿ ತಪ್ಪು ಏನೂ ಇಲ್ಲ. ಈಗ ಪೋಲೀಸ್ ಇಲಾಖೆಯಲ್ಲಿ ಇದ್ದಂಥವರು ಲೋಕಸಭಾ ಸದಸ್ಯರಾಗಿದ್ದಾರೆ. ಆದುದರಿಂದ ಅವರು ಹೇಳಿದಂತಹ ಮಾತಿನಲ್ಲಿ ತಪ್ಪು ಇಲ್ಲ. ಆದರೆ ಚನ್ನಿಗಪ್ಪ ಹೇಳಿದ್ದಾರೆ, ಖಂಡಿತವಾಗಿ ಈ ವರ್ಷ ಇದನ್ನು ....

ಶ್ರೀ ಜೆ. ಸಿ. ಮಾಧುಸ್ವಾಮಿ : ಸುರೇಶ್ ಕುಮಾರ್ ಅವರು ಚನ್ನಿಗಪ್ಪನವರಿಗೆ ಹೇಳಬಾರದಾಗಿತ್ತು. ನಮಗೆ ಯಾರಿಗಾದರೂ ಹೇಳಲಿ.

ಅಧ್ಯಕ್ಷರು : ಅವರು ಈ ರೀತಿ ಹೇಳಲಿಲ್ಲ. ನೀವು ಅದನ್ನು ಹೇಳಿ ಮತ್ತೆ ಪುನಃ ಅರ್ಥ ಕಲ್ಪನೆ ಮಾಡಿದಿರಿ ಅಷ್ಟೆ. ನೀವೂ ಸಹ ಅದೇ ಜಿಲ್ಲೆಯವರೇ ತಾನೇ? ನಿಮಗೂ ಅವರಿಗೂ ಒಳಗಡೆ ಏನಿದೆಯೋ ಏನೋ ಗೊತ್ತಿಲ್ಲ.

ಶ್ರೀ ಸಿ. ಚನ್ನಿಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಪೋಲೀಸ್ ಇಲಾಖೆಯಿಂದ ಯಾರೇ ಒಬ್ಬ ಅಧಿಕಾರಿ ರಾಷ್ಟ್ರದ ಯಾವುದೇ ಒಂದು ಸ್ಥಾನ ಮುಟ್ಟುವುದಕ್ಕೆ ಅರ್ಹರು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕಾರಣ ಪೋಲೀಸ್ ಇಲಾಖೆಯಲ್ಲಿ ಯಾರೇ ಒಬ್ಬ ಅಧಿಕಾರಿ ಕೆಲಸಕ್ಕೆ ಸೇರಬೇಕಾದರೆ ಆ ಅಧಿಕಾರಿ ಏನಾದರೂ ಕೆಟ್ಟ ಕೆಲಸ ಮಾಡಿದ್ದರೆ ಅವರನ್ನು ಭರ್ತಿ ಮಾಡುವುದಿಲ್ಲ. ಐ.ಪಿ.ಎಸ್. ಆಗಿರಬಹುದು, ಐ.ಎ.ಎಸ್. ಆಗಿರಬಹುದು. ಐ.ಪಿ.ಎಸ್. ಅಧಿಕಾರಿಗಳು ಅಥವಾ ಪೋಲೀಸ್ ಇಲಾಖೆಯ ಅಧಿಕಾರಿಗಳು ಇವತ್ತು ರಾಜ್ಯಾಂಗದಲ್ಲಿ ಯಾವುದೇ ಒಂದು ಮೆಟ್ಟಲು ಮುಟ್ಟಿದಾಗ ಅವರು ಶಿಸ್ತು ಮತ್ತು ಸಂಯಮದಿಂದ ಒಳ್ಳೆಯ ಕೆಲಸ ಮಾಡುತ್ತಾರೆ. ಇದಕ್ಕೆ ಉದಾಹರಣೆ ಮಾನ್ಯ ಶ್ರೀ ಕೋದಂಡರಾಮಯ್ಯನವರು, ಅಲ್ಲದೆ ನಾನು ಈಗ ಪೋಲೀಸ್ ಇಲಾಖೆಯಿಂದ ಪ್ರತಿನಿಧಿ ಜನರ ಆಶೀರ್ವಾದ ಪಡೆದು ಉತ್ತಮ ಕೆಲಸ ಮಾಡುತ್ತಿದ್ದೇನೆ.

ಮಾನ್ಯ ಸದಸ್ಯರು : ಸರ್ಕಾರ ಇವರಿಗೆ ಗೃಹ ಖಾತೆ ಕೊಡಬೇಕಾಗಿತ್ತು, ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು.

ಅಧ್ಯಕ್ಷರು : ನಿಮ್ಮ ಶಿಸ್ತನ್ನು ಮೆಚ್ಚಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀ ಕೋದಂಡರಾಮಯ್ಯನವರ ಶಿಸ್ತನ್ನು ಮೆಚ್ಚಿದ್ದೀರೋ ಅಥವಾ ಇಲ್ಲವೋ?

ಅಧ್ಯಕ್ಷರು : ಅವರ ಶಿಸ್ತನ್ನೂ ಮೆಚ್ಚಿದ್ದೇವೆ. ಅವರು ಅಶಿಸ್ತಿನಲ್ಲಿ ತೊಡಗಿದ್ದಾರೆಂದು ನನಗೆ ಏನೂ ಕಂಪ್ಲೆಂಟ್ ಬಂದಿಲ್ಲ.